## ಕ್ರೀಡಾಪಟುಗಳಿಗೆ...

ಕ್ರೀಡಾಪಟುಗಳಿಗಂತೂ ಸಾಕ್ಸ್ ತುಂಬಾ ಮುಖ್ಯ. ವಿರಾಟ್ ಕೊಹ್ಲಿ ಹೆಸರಿನ ಕಂಪೆನಿಯ ಸಾಕ್ಸ್‌ಗಳ ಬೆಲೆ ಶುರುವಾಗುವುದೇ 1000ಕ್ಕೂ ಹೆಚ್ಚಿನದ್ದರಿಂದ. ಪಾದಗಳನ್ನು ಬೆಚ್ಚಗಿಡಲು, ಪಾದರಕ್ಷೆ ಹಾಳಾಗದೆ ಇರಲು, ಫ್ಯಾಷನ್ ಸ್ಟೇಟ್‌ಮೆಂಟ್ ಎಲ್ಲಕ್ಕೂ ಅಗತ್ಯವೆನಿಸಿದ ಸಾಕ್ಸ್ ಬಳಕೆದಾರರಿಗೆ ಕೊನೆಯಲ್ಲಿ ಒಂದು ಟಿಪ್ಸ್: ಮಲಗುವಾಗ ಸಾಕ್ಸ್ ಧರಿಸದಿರಿ. ರಕ್ತಚಲನೆಗೆ ಇದರಿಂದ ತೊಡಕಾಗುತ್ತದೆ.



ವಿಕ್ಟೋರಿಯಾ ಅಂಡ್ ಆಲ್ಬರ್ಟ್ ಮ್ಯೂಸಿಯಂನಲ್ಲಿ ಇರುವ ಸಾಕ್ಸ್

ಎಂದೇ ಜನಜನಿತವಾಯಿತು. ಸಾಕ್ಸ್ ತೊಡುವುದು ಪ್ರತಿಷ್ಠಿತರ ಹೆಮ್ಮೆ ಎಂಬ ಭಾವನೆ ಹೆಚ್ಚಾಗಿ ಫ್ರೆಂಚ್ ಹಾಗೂ ಇಟಲಿ ದೇಶಗಳಲ್ಲಿ ಕಂಡುಬಂದ ಕಾಲಘಟ್ಟ ಅದು.

ಇಂಗ್ಲೆಂಡ್‌ನ ವಿಲಿಯಂ ಲೀ ಎನ್ನುವ ಪಾದ್ರಿ ನೇಯುವ ಯಂತ್ರವನ್ನು ಕಂಡುಹಿಡಿದದ್ದು 1589ರಲ್ಲಿ. ಈ ಯಂತ್ರಾನ್ವೇಷಣೆಯ ಅವನ ಮುಖ್ಯ ಉದ್ದೇಶ ಸಾಕ್ಸ್ ನೇಯ್ಗೆ. ಸೂಜಿಯಿಂದ ಒಂದು ಜೊತೆ ಸಾಕ್ಸ್ ನೇಯಲು ಬೇಕಾಗುತ್ತಿದ್ದ ಸಮಯದಲ್ಲಿ ಆರು ಜೊತೆ ಸಾಕ್ಸ್‌ಗಳನ್ನು ಲೀ ಅನ್ವೇಷಿಸಿದ ಯಂತ್ರ ನೇಯ್ದುಕೊಡಬಲ್ಲದಾಗಿತ್ತು. ಇಂತಹ ಅನ್ವೇಷಣೆಗೆ ನೆರವಾದವರು ಜಾನ್ ಆಸ್ಟನ್ ಎಂಬ ಸಹಾಯಕ. ಈ ಯಂತ್ರವೇ ಮುಂದೆ ಜವಳಿ ಉದ್ಯಮದಲ್ಲಿ ಕ್ರಾಂತಿಗೆ ಕಾರಣವಾಯಿತೆನ್ನುವುದು ಬೇರೆ ಮಾತು.

ಲೀ ತಮ್ಮ ಯಂತ್ರವನ್ನು ತೆಗೆದುಕೊಂಡು ಒಂದನೇ ಎಲಿಜಬೆತ್ ರಾಣಿ ಬಳಿಗೆ ಹೋದರು. ಯಂತ್ರದಿಂದ ಸಾಕ್ಸ್ ಹೊಲಿದುಕೊಟ್ಟರು. ಅದು ರಾಣಿಗೆ ಸಮಾಧಾನ ತರಲಿಲ್ಲ. ಅದು ತಮ್ಮ ಪಾದಗಳಿಗೆ ಹಿತಾನುಭವ ನೀಡುತ್ತಿಲ್ಲ ಎಂದುಬಿಟ್ಟರು. ರಾಣಿ ಮೆಚ್ಚಿದರಷ್ಟೆ ಆಗ ಪೇಟೆಂಟ್ ಸಿಗುತ್ತಿದ್ದುದು. ಈ ರಾಣಿಯನ್ನು ಮೆಚ್ಚಿಸಲಂತೂ ಆಗಲಿಲ್ಲ, ಫ್ರಾನ್ಸ್ ರಾಜ ನಾಲ್ಕನೇ ಹೆನ್ರಿ ಹತ್ತಿರವಾದರೂ ಹೋಗೋಣವೆಂದು ಲೀ ತೀರ್ಮಾನಿಸಿದರು. ಹೆನ್ರಿ ಯಂತ್ರವನ್ನು ಮೆಚ್ಚಿದ್ದಷ್ಟೇ ಅಲ್ಲ, ಒಂದು ಸಾಕ್ಸ್ ತಯಾರಿಕಾ ಪ್ಲಾಂಟ್ ಹಾಕಲೆಂದೇ ಹಣಕಾಸು ನೆರವು ನೀಡಿದರು. ರುಅನ್‌ನಲ್ಲಿ ಸ್ಟಾಕಿಂಗ್ ಕಾರ್ಖಾನೆ ಶುರುವಾದದ್ದು ಹಾಗೆ.

ಹದಿನೇಳನೇ ಶತಮಾನದಲ್ಲಿ ಪ್ಲಾಂಟ್‌ಗಳು ಉದ್ದವಾದವು. ಸಾಕ್ಸ್‌ಗಳು ಗಿಡ್ಡವಾಗತೊಡಗಿದವು. ಅಷ್ಟು ಹೊತ್ತಿಗೆ ಕೈಗಾರಿಕಾ ಕ್ರಾಂತಿಯೂ ಆಗಿದ್ದರಿಂದ ಸಾಕ್ಸ್ ತಯಾರಿಕೆ ದೊಡ್ಡ ಉದ್ಯಮವೇ ಆಗಿ ಬದಲಾಗಿತ್ತು. ಈಗ ಬಿಡಿ, ಸಾಕ್ಸ್‌ನಲ್ಲಿ ಹಲವು ಬಗೆ: ಕ್ರೂ ಸಾಕ್ಸ್, ಹಾಫ್ ಸಾಕ್ಸ್, ನೋ ಶೋ ಸಾಕ್ಸ್, ಆ್ಯಂಕಲ್ ಸಾಕ್ಸ್, ಕ್ವಾರ್ಟರ್ ಲೆಂಗ್ತ್ ಸಾಕ್ಸ್, ಕಾಫ್ ಸಾಕ್ಸ್, ಮಿಡ್ ಕಾಫ್ ಸಾಕ್ಸ್, ನೀ ಹೈ ಸಾಕ್ಸ್, ಥೈ ಹೈ ಸಾಕ್ಸ್... ಹೀಗೆ.

ಮುಂಗಾಲನ್ನು ಮಾತ್ರ ಮುಚ್ಚುವಂತಹದ್ದು ಹಾಫ್ ಸಾಕ್ಸ್. ಚರ್ಮದ ಬಣ್ಣವನ್ನೇ ಹೋಲುವಂತೆ ಗಟ್ಟಿಯಾಗಿ ಪಾದಗಳನ್ನು ಮಾತ್ರ ಹಿಡಿದಪ್ಪುವಂತಹದ್ದು ನೋ ಶೋ ಸಾಕ್ಸ್. ಬೂಟು ಅಥವಾ ಸ್ಯಾಂಡಲ್‌ನ ಹೊರಗಡೆ ಇದು ಕಾಣುವುದಿಲ್ಲ. ಹಿಮ್ಮಡಿವರೆಗೆ ಹಿಡಿದಿಡುವಂತಹದ್ದು ಆ್ಯಂಕಲ್ ಸಾಕ್ಸ್. ಹಿಮ್ಮಡಿಗಿಂತ ತುಸು ಎತ್ತರದವರೆಗೆ ಇರುವುದು ಕ್ವಾರ್ಟರ್ ಲೆಂಗ್ತ್ ಸಾಕ್ಸ್. ಮೊಣಕಾಲಿಗೂ ಹಿಮ್ಮಡಿಗೂ ಮಧ್ಯದಲ್ಲಿ ನಿಲ್ಲುವಂತಹದ್ದು ಮಿಡ್ ಕಾಫ್ ಸಾಕ್ಸ್. ಅದಕ್ಕಿಂತ ತುಸು ಎತ್ತರದವರೆಗೆ ಇರುವುದು ಕಾಫ್ ಸಾಕ್ಸ್. ಉಳಿದ ಬಗೆಯ ಸಾಕ್ಸ್‌ಗಳು ಹೆಸರಿಗೆ ತಕ್ಕಂತೆ ಕಾಲಿನ ಭಾಗಗಳನ್ನು ಮುಚ್ಚಬಲ್ಲವು. ಮಂಡಿಗೂ ಹಿಮ್ಮಡಿಗೂ ಸರಿಯಾಗಿ ಮಧ್ಯದಲ್ಲಿ ಇರುವಷ್ಟು ಉದ್ದದ ಸಾಕ್ಸ್‌ಗಳಿಗೆ ಕ್ರೂ ಸಾಕ್ಸ್ ಎನ್ನುತ್ತಾರೆ. ಎಷ್ಟೋ ಸೆಲೆಬ್ರಿಟಿಗಳು ಈ ಬಗೆಯ ಸಾಕ್ಸ್ ತೊಡುತ್ತಾರೆ.

ಹಾಡುಗಾರ್ತಿ ಟೇಲರ್ ಸ್ವಿಫ್ಟ್, ನಟಿ–ರೂಪದರ್ಶಿ ಕಿಯಾ ಗರ್ಬರ್, ಗಾಯಕ ಜಸ್ಟಿನ್ ಬೀಬರ್ ಎಲ್ಲರೂ ಸಾಕ್ಸ್ ತೊಟ್ಟು ಸ್ಟೇಟ್‌ಮೆಂಟ್ ಕೊಟ್ಟವರು. ಜಸ್ಟಿನ್ ಬೀಬರ್ ಅಂತೂ ಯಾವುದೋ ಬಣ್ಣದ ಸ್ಯಾಂಡಲ್‌ಗೆ ಇನ್ಯಾವುದೋ ಬಣ್ಣದ ಸಾಕ್ಸ್ ತೊಟ್ಟರೆನ್ನುವ ಕಾರಣಕ್ಕೇ ವಿವಾದಕ್ಕೆ ಒಳಗಾದವರು. ಫ್ಯಾಷನ್ ಸೆನ್ಸ್ ಇಲ್ಲದ ಹುಂಬ ಎಂದು ಇವರನ್ನು ಅದೇ ಕಾರಣಕ್ಕೆ ಅನೇಕರು ಟೀಕಿಸಿದ್ದರು. ಆದರೆ, ಬೀಬರ್ ಅವೆಲ್ಲವನ್ನು ತಲೆಗೆ ಹಾಕಿಕೊಳ್ಳುವವರ ಪೈಕಿ ಅಲ್ಲ. ಸಾಕ್ಸ್ ಹಾಗೂ ಸ್ಯಾಂಡಲ್‌ಗಳ ದೊಡ್ಡ ಸಂಗ್ರಹ ಇರುವ ಅವರು 'ಕಿಂಗ್ ಆಫ್ ಸಾಕ್ಸ್ ಅಂಡ್ ಸ್ಯಾಂಡಲ್ಸ್' ಎನಿಸಿಕೊಂಡಿದ್ದಾರೆ.

ಭಾರತದ ನಟ–ನಟಿಯರಲ್ಲೂ ಸಾಕ್ಸ್‌ಮೋಹಿಗಳು ಇದ್ದಾರೆ. 'ರಾ ರಾ ರಕ್ಕಮ್ಮ' ಎಂದು ಸುದೀಪ್ ಜತೆಗೆ ಹೆಜ್ಜೆ ಹಾಕಿದ್ದ ಜಾಕ್ವೆಲಿನ್ ಫರ್ನಾಂಡಿಸ್ ಬಳಿ ಸಾಕ್ಸ್‌ಗಳ ದೊಡ್ಡ ಸಂಗ್ರಹವಿದೆ. ತೆಲುಗು ನಟಿ ಸಮಂತಾ ಅವರಿಗೂ ಸಾಕ್ಸ್ ಮೆಚ್ಚು. ■



ಸಾಕ್ಸ್‌ಧಾರಿ ಜಾಕ್ವೆಲಿನ್